**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS no.**380/22 **DW**: 1

**ದಿಃ 14.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎನ್ ಎಚ್ ವಕೀಲರಿಂದಃ**

ನನಗೆ ಸಹಿ ಮಾಡಲು ಮಾತ್ರ ಬರುತ್ತದೆಯೇ ಹೊರತು ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಈ ದಾವೆಯಲ್ಲಿ ಹಾಕಿರುವ ಕೈಫಿಯತ್ ನಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿ ಹಾಕಿರುತ್ತೇನೆ. ವಾದಿಯರು ನನ್ನ ಸಹೋದರನ ಮಕ್ಕಳಾಗಿರುತ್ತಾರೆ. ಸದರಿ ವಾದಿಯರ ತಂದೆಯಾದ ಯಲ್ಲಪ್ಪರವರು ಅವರು ಯಾವ ರೀತಿ ಮತ್ತು ಎಂದು ಮರಣ ಹೊಂದರುತ್ತಾರೆಂದು ಮಾಹಿತಿ ಇಲ್ಲ.

2. ಬಸವಣ್ಣೆಪ್ಪ ನಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. ಸದರಿ ಬಸವಣ್ಣೆಪ್ಪನ ಮೊಮ್ಮಕ್ಕಳೇ ವಾದಿಯರು ಆಗಿರುತ್ತಾರೆ. ಸದರಿ ಬಸವಣ್ಣೆಪ್ಪನಿಗೆ 7 ಜನ ಮಕ್ಕಳಿದ್ದು ಅವರೆಂದರೆ ಯಲ್ಲವ್ವ, ಯಲ್ಲಪ್ಪ, ಮಹಾದೇವಿ, ಮಲ್ಲಪ್ಪ, ಗುರುಶಿದ್ದಪ್ಪ, ರಮೇಶ ಮತ್ತು ಬಸವ್ವ ಆಗಿರುತ್ತಾರೆ. ಬಸವಣ್ಣೆಪ್ಪ ಬದುಕಿರುವವರೆಗೂ ಎಲ್ಲರ ಜೊತೆ ವಿಶ್ವಾಸದಿಂದ ಇದ್ದರೂ ಎಂದರೆ ಸರಿ. ಅವರು ಎಲ್ಲರನ್ನೂ ಒಂದೇ ರೀತಿಯಾಗಿ ನೋಡುತ್ತಿದ್ದರು ಎಂದರೆ ಸರಿ. ಬಸವಣ್ಣೆಪ್ಪ ಬದುಕಿರುವವರೆಗೂ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ವಾಟ್ನಿಯಾದ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಹಿಸ್ಸೆಯಾದ ಬಗ್ಗೆ ದಾಖಲೆಗಳನ್ನು ಸಹ ಕೊಟ್ಟಿರುತ್ತೇನೆ. ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲೆಗಳನುನ ತೋರಿಸಿ ಅರದಲ್ಲಿ ಯಾವ ದಾಖಲೆಯು ವಾಟ್ನಿ ಪತ್ರ ಎಂದರೆ ಸಾಕ್ಷಿ ನನ್ನ ವಕೀಲರಿಗೆ ಕೊಟಿಟರುತ್ತೇನೆ ಎಂದು ನುಡಿಯುತ್ತಾರೆ. ಬಸವಣ್ಣೆಪ್ಪ ಬದುಕಿದ್ದಾಗ ಯಾವುದೇ ವಾಟಿಯಾಗಿಲ್ಲ ಎಂದು ಅವರ ಮೊಮ್ಮಕ್ಕಳು ಅಸಲರ್ಜಿಯಲ್ಲಿ ತಿಳಿಸಿರುತ್ತಾರೆಂದರೆ ಸರಿಯಲ್ಲ. ಯಾವುದೇ ರೀತಿಯ ವಾಟ್ನಿಯಾಗದಿದ್ದರೂ ಹಾಗೂ ಆ ರೀತಿಯ ದಾಖಲೆ ಇರದಿದ್ದರೂ ತಾವು ವಾದಿಯರ ಹಕ್ಕಿಗೆ ನಷ್ಟ ಉಂಟುಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಬಸವಣ್ಣೆಪ್ಪ ಕೊರಾನಾ ಅವಧಿಯಲ್ಲಿ ಹಾಸಿಗೆಯನ್ನು ಹಿಡಿದಿದ್ಮು ಎಲ್ಲ- ದೈನಂದಿನ ಕಾರ್ಯಕ್ರಮಗಳು ಸದರಿ ಹಾಸಿಗೆಯ ಮೇಲೆ ಆಗುತ್ತಿತ್ತು ಎಂದರೆ ಸರಿಯಲ್ಲ. ಬಸವಣ್ಣೆಪ್ಪನಿಗೆ ಆ ಸಮಯದಲ್ಲಿ ಯಾರು ಮನೆಗೆ ಬಂದು ಹೋಗುತ್ತಿದ್ದರೂ ಎಂಬ ಬಗ್ಗೆ ಪ್ರಜ್ಞೆ

ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಕೊರಾನಾ ಅವಧಿಯಲ್ಲಿ ಅನಾರೋಗ್ಯವಾಗಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

(ವಕೀಲರು ಕೆಲವೊಂದು ದಾಖಲೆಗಳ ಮೇಲೆ ಹೆಚ್ಚಿನ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**